ಇ) ಇಲ್ಲ.

ಈ) CAS 1996ರ ಯೋಜನೆಯ ಪ್ರಕ್ರಿಯೆಯನ್ನು ಆಖೈರು ಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಶಿಕ್ಷಕರ ಮುಂಬಡ್ತಿ

731 (1114) ಶ್ರೀ ಎ.ಮಂಜು (ಅರಕಲಗೂಡು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯು.ಜಿ.ಸಿಯ ಮಾರ್ಗಸೂಚಿಯಂತೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ CAS Statutes 1996 ಪ್ರಕಾರ ಮುಂಬಡ್ತಿ ಪಡೆಯಲು ಅರ್ಹ ಶಿಕ್ಷಕರ ಸಂಖ್ಯೆ ಎಷ್ಟು?

ಆ) ಈ ಶಿಕ್ಷಕರುಗಳ CAS Statutes 1996ರ ಪ್ರಕಾರ ಮುಂಬಡ್ತಿಯನ್ನು ಈ ತನಕ ತಡೆಹಿಡಿಯಲು ಕಾರಣಗಳೇನು;

ಇ) ಸದರಿ ಬಡ್ತಿ ವಿಚಾರದಲ್ಲಿ ಯು.ಜಿ.ಸಿ.ಯು ದಿನಾಂಕ: 19.7.2010ರ 31.12.2008 ಪತ್ರದಲ್ಲಿ ಅರ್ಹ ಶೀಕ್ಷಕರಿಗೆ CAS Statutes 1996ರ ಪ್ರಕಾರ ಮುಂಬಡ್ತಿಯನ್ನು ಕೊಡಲು ನಿರ್ದೇಶಿಸಿದ್ದರೂ ಸಹ ಸದರಿ ಪತ್ರವನ್ನು ಕಡೆಗಣಿಸಿರಲು ಕಾರಣವೇನು;

ಈ) ಕರ್ನಾಟಕ ವಿಶ್ವವಿದ್ಯಾಲಯದ ಕಾಯ್ದೆ 2000 15(3)ರ ಪ್ರಕಾರ ಕುಲಪತಿಗಳು ತಮ್ಮ ಕರ್ತವ್ಯಗಳನ್ನು CAS Statutes 1996 31(1-4)ನ್ನು ಸಮರ್ಪಕವಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಸರಕಾರವು ಏನು ಕ್ರಮ ಕೈಗೊಳ್ಳುತ್ತದೆ?

ಡಾ॥ ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ ಸಚಿವರು) :

ಅ) 08

ಆ) ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ CAS Statutes 1996ರ ಪ್ರಕಾರ ಮುಂಬಡ್ತಿಯನ್ನು ಹೊಸದಾಗಿ ಶಿಕ್ಷಣ ತಜ್ಞರ ಪಟ್ಟಿಯನ್ನು ತಯಾರಿಸಿ ಶಿಕ್ಷಕರಿಗೆ ಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ವಿಷಯತಜ್ಞರ ಪಟ್ಟಿಯ ವಾಯ್ದೆ ಮುಗಿದಿದ್ದರಿಂದ ಹೊಸದಾಗಿ ವಿಷಯತಜ್ಞರ ಹೆಸರುಗಳನ್ನು ಬೇರೆ ವಿಶ್ವವಿದ್ಯಾಲಯಗಳಿಂದ ಪಡೆದು ಪರಿನಿಯಮಾವಳಿಗಳ ಪ್ರಕಾರ ಹೊಸದಾಗಿ ಶಿಕ್ಷಣ ತಜ್ಞರ ಪಟ್ಟಿಯನ್ನು

ತಯಾರಿಸಿ CAS ಅಡಿಯಲ್ಲಿ ಶಿಕ್ಷಕರಿಗೆ ಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) 1996 CAS ಪರಿನಿಯಮಾವಳಿಗಳ ಪ್ರಕಾರ ಮುಂಬಡ್ತಿ ಪಡೆಯಲು ಅರ್ಹರಿರುವ ಶಿಕ್ಷಕರಿಗೆ ಮುಂಬಡ್ತಿ ನೀಡಲು ವಿಶ್ವವಿದ್ಯಾಲಯ ಕಾಯ್ದೆ 2000ರ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಹೊಸ ಪದವಿ ಪೂರ್ವ ಕಾಲೇಜು ಪ್ರಾರಂಭ

732 (173) ಶ್ರೀ ಮುನಿರಾಜು. ಎಸ್ (ದಾಸರಹಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ, ಹೊಸ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಅವಶ್ಯಕತೆ ಇರುವೆಡೆಗೆ ಯಾವ ದಿನಾಂಕದಿಂದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಮತ್ತು ಇ) ಖಾಸಗಿಯವರಿಗೆ ಪದವಿ ಪೂರ್ವ ಕಾಲೇಜು ತೆರೆಯಲು ಕಳೆದ ಎರಡು ವರ್ಷಗಳಲ್ಲಿ 268 ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ ಹಾಗೂ ಸ್ಥಳೀಯ ಅಗತ್ಯತೆಗಳನ್ನು ಗಮನಿಸಿ, ಮುಂದಿನ ದಿನಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.